ಸಿ.ಸಿ.ನಂ.631/2017 ಮತ್ತು ಸಿ.ಸಿ.ನಂ.2049/2025

ಪಿ.ಡಬ್ಲೂಃ 1

ದಿನಾಂಕಃ 30/12/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

1. ದಿನಾಂಕ 16.04.2008 ರಂದು ಮಡಿಕೇರಿಯ ಸಹಕಾರ ಸಂಘದ ಸಹಾಯಕರ ನಿರ್ಬಂಧಕ ಕಚೇರಿಯಲ್ಲಿ, ಸಹಕಾರ ಸಂಘದ ನಿರೀಕ್ಷಕರಾಗಿ ನೇಮಕಗೊಂಡಿರುತ್ತೇನೆ. ನಾನು ಸಹಕಾರ ಸಂಘದ ನಿರೀಕ್ಷಕರಾಗಿ ನೇಮಕಗೊಂಡ ದಿನದಿಂದ ಈವರೆಗೂ 13 ರಿಂದ 14 ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆಯನ್ನು ಮಾಡಿರುತ್ತೇನೆ. ನಾನು ಸದರಿ ಪ್ರಕರಣಗಳಿಗೆ ಸಂಬಂಧಿಸಿದ ತನಿಖೆಯ ವರದಿಯನ್ನು ಸಲ್ಲಿಸಿರುತ್ತೇನೆ. ಸದರಿ ಎಲ್ಲಾ ಪ್ರಕರಣಗಳಲ್ಲಿ ನಾನು ಒಬ್ಬನೇ ತನಿಖೆಯನ್ನು ಕೈಗೊಂಡಿರುತ್ತೇನೆ. ನಾನು ನೀಡಿದಂತಹ ವರದಿಯ ಮೇರೆಗೆ ಚಾಸಾ-1 ರವರು ಕ್ರಿಮಿನಲ್ ಪ್ರಕರಣ ದಾಖಲಿಸುವ ಬಗ್ಗೆ ಪ್ರಾಧಿಕಾರ ನೀಡಲಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಮತ್ತು ಚಾಸಾ-1 ರವರು ಜಂಟಿಯಾಗಿ ತನಿಖೆಯನ್ನು ಕೈಗೊಂಡಿರುತ್ತೇವೆ ಮತ್ತು ಜಂಟಿ ವರದಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸುಳ್ಳು. ನಾನು ಮತ್ತು ಚಾಸಾ-1 ರವರು ಜಂಟಿಯಾಗಿ ತನಿಖೆಯನ್ನು ಮಾಡಿ ವರದಿಯನ್ನು ನೀಡಿದ್ದರೂ ಕೂಡ ನ್ಯಾಯಾಲಯದಲ್ಲಿ ಸುಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನಗೆ ಬ್ಯಾಂಕಿನ ವ್ಯವಹಾರದ ಬಗ್ಗೆ ಗೊತ್ತಿದೆ. ಕೆಜಿಎಫ್ ನ ಕೆನರಾ ಬ್ಯಾಂಕ್ ನಲ್ಲಿ ದಿನಕ್ಕೆ 30 ರಿಂದ 40 ಖಾತೆಯನ್ನು ಗ್ರಾಹಕರು ಹೊಸದಾಗಿ ತೆರೆಯುತ್ತಾರೆ ಎಂದರೆ ಇರಬಹುದು. ಕರುಮಾರಿ ಸಹಕಾರ ಸಂಘದವರೂ ಕೂಡ ಕೆಜಿಎಫ್ ನ ಕೆನರಾ ಬ್ಯಾಂಕಿನಲ್ಲಿ ಖಾತೆಯನ್ನು ತೆರೆದಿರುತ್ತಾರೆ ಎಂದರೆ ಸುಳ್ಳು. ದಿನಾಂಕ 21.09.2010 ರಂದು ಕರುಮಾರಿ ಸಹಕಾರ ಸಂಘದಲ್ಲಿ ಅವ್ಯವಹಾರ ಆಗಿದೆ ಎಂದು ಹೇಳಿ ನನ್ನ ಮೇಲಾಧಿಕಾರಿಯವರು ಆದೇಶ ನೀಡಿರುತ್ತಾರೆ. ನನ್ನ ಮೇಲಾಧಿಕಾರಿಯವರು ಸುಮಾರು 37 ಸಹಕಾರ ಸಂಘದಲ್ಲಿ ಅವ್ಯವಹಾರ ಆಗಿರುತ್ತದೆ ಎಂದು ಹೇಳಿ ಆದೇಶ ಮಾಡಿರುತ್ತಾರೆ ಅದರಲ್ಲಿ ಕರುಮಾರಿ ಸಹಕಾರ ಸಂಘವೂ ಕೂಡ ಒಂದು ಆಗಿರುತ್ತದೆ. ಕರುಮಾರಿ ಸಹಕಾರ ಸಂಘದ ಅಧ್ಯಕ್ಷರು, ಕಾರ್ಯದರ್ಶಿ ಅಥವಾ ಸದಸ್ಯರು ದೂರನ್ನು ನೀಡಿರುವುದಿಲ್ಲ. ಸಿ.ಸಿ.ನಂ.579/2014 ಪ್ರಕರಣದ 1 ರಿಂದ 3 ನೇ ಆರೋಪಿತರು ಕೆನರಾ ಬ್ಯಾಂಕಿನಲ್ಲಿ ಖಾತೆಯನ್ನು ತೆರೆದಿರುತ್ತಾರೆ ಎಂದರೆ ಸುಳ್ಳು. ಅದೇ ರೀತಿ 1 ಮತ್ತು 2 ನೇ ಆರೋಪಿತರು ಬಂಗಾರಪೇಟೆ ಶಾಖೆಯ ಡಿ.ಸಿ.ಸಿ. ಬ್ಯಾಂಕಿನಲ್ಲೂ ಕೂಡ ಖಾತೆಯನ್ನು ತೆರೆದಿರುತ್ತಾರೆ. ಆ ಸಮಯದಲ್ಲಿ 3 ನೇ ಆರೋಪಿ 1 ಮತ್ತು 2 ನೇ ಆರೋಪಿತರನ್ನು ಖಾತೆ ತೆರೆಯುವ ಸಮಯದಲ್ಲಿ ಗುರುತಿಸಿರುತ್ತಾರೆ. 1 ಮತ್ತು 2 ನೇ ಆರೋಪಿತರು ಮೂಲತಃ ಕರುಮಾರಿ ಸಹಕಾರ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಆಗಿರುವುದಿಲ್ಲ.

3. ಸಾಮಾನ್ಯವಾಗಿ ಸಹಕಾರ ಸಂಘದವರು ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಬೇಕಾದರೆ ಸಹಕಾರ ಸಂಘದ ನೊಂದಣಿ ಪ್ರಮಾಣ ಪತ್ರ, ಸಂಘದ ನೊಂದಾಯಿತ ಉಪ ನಿಯಮಗಳ ಪ್ರತಿ, ಸಂಘದ ಅಧ್ಯಕ್ಷಕರು ಆಯ್ಕೆಯಾದ ಪ್ರತಿ, ಕಾರ್ಯದರ್ಶಿಯವರ ನೇಮಕಾತಿ ಆದೇಶ, ವಾಣಿಜ್ಯ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯಬೇಕಾದರೆ ಸಂಬಂಧಪಟ್ಟ ನಿರ್ಬಂಧಕರಿಂದ ಅನಮತಿ ಪತ್ರ ಹಾಗೂ ಸಂಘದ ಆಡಳಿತ ಮಂಡಳಿಯ ನಡವಳಿಕೆಯನ್ನು ನೀಡಬೇಕಾಗುತ್ತದೆ. ಸದರಿ ಆಡಳಿತ ಮಂಡಳಿಯ ನಡವಳಿಕೆಯಲ್ಲಿ ನಿರ್ದೇಶಕರ ಸಹಿ ಇರಬೇಕಾಗುತ್ತದೆ ಎಂದರೆ ಸರಿ.

4. ಕರುಮಾರಿ ಸಹಕಾರ ಸಂಘದವರು ಕೆನರಾ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯುವ ಸಮಯದಲ್ಲಿ ಎಲ್ಲಾ ದಾಖಲೆಗಳನ್ನು ನೀಡಿರುತ್ತಾರೆ ಎಂದರೆ ಇರಬಹುದು. ಸಾಕ್ಷಿ ಮುಂದುವರೆದು ನಾನು ತನಿಖೆಯನ್ನು ಮಾಡುವ ಸಮಯದಲ್ಲಿ ಬ್ಯಾಂಕಿನವರಿಗೆ ದಾಖಲೆಗಳನ್ನು ನೀಡಲು ಕೇಳಿಕೊಂಡಿರುತ್ತೇನೆ ಆದರೆ ಅವರು ನನಗೆ ನಿರಾಕರಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾಖಲೆಗಳನ್ನು ಹಾಜರುಪಡಿಸಿದ ಮೇರೆಗೆ ಖಾತೆಯನ್ನು ತೆರೆದಿರುತ್ತಾರೆ ಎಂದರೆ ಇರಬಹುದು. ಕರುಮಾರಿ ಸಹಕಾರ ಸಂಘದವರು ನೀಡಿದಂತಹ ದಾಖಲೆಗಳ ಮೇರೆಗೆ ಕೆನರಾ ಬ್ಯಾಂಕಿನಲ್ಲಿ ಖಾತೆ ತೆರೆಯಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕರುಮಾರಿ ಸಹಕಾರ ಸಂಘದ ಮೂಲ ಕಾರ್ಯದರ್ಶಿ ಚಾಸಾ-9 ಆಗಿದ್ದು ಸದರಿಯವರ ಗಮನಕ್ಕೆ ಬಾರದ ಹಾಗೆ ಬೇರೆಯವರು ಸಂಘಕ್ಕೆ ಸಂಬಂಧಿಸಿದ ಖಾತೆಯನ್ನು ತೆರೆದಿರುವ ಬಗ್ಗೆ ಮಾಹಿತಿಯನ್ನು ಕೇಳಿ ದಿನಾಂಕ 16.11.2010 ರಂದು ಅರ್ಜಿಯನ್ನು ನೀಡಿರುತ್ತಾರೆ ಆದರೆ ಬ್ಯಾಂಕಿನವರು ಯಾವುದೇ ಮಾಹಿತಿಯನ್ನು ಕೊಟ್ಟಿರುವುದಿಲ್ಲ. ನಾನು ಬ್ಯಾಂಕಿನವರಿಗೆ ದಾಖಲೆಗಳನ್ನು ನೀಡಲು ಲಿಖಿತವಾಗಿ ಮನವಿಯನ್ನು ಸಲ್ಲಿಸಲು ಹೋದಾಗ ಅವರು ಸ್ವೀಕರಿಸಲು ನಿರಾಕರಿಸಿರುತ್ತಾರೆ. ಆದ್ದರಿಂದ ನಾನು ಕರುಮಾರಿ ಸಹಕಾರ ಸಂಘದ ಕಾರ್ಯದರ್ಶಿಯವರಾದ ಚಾಸಾ-9 ರವರ ಮುಖಾಂತರ ಬ್ಯಾಂಕಿನವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ. ನಾನು ಬ್ಯಾಂಕಿನವರಿಗೆ ಯಾವುದೇ ಲಿಖಿತವಾಗಿ ಅಥವಾ ಮೌಖಿಕವಾಗಿ ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸುಳ್ಳು.

5. ಕೆನರಾ ಬ್ಯಾಂಕಿನವರು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಖಾತೆಯನ್ನು ತೆರೆಯಲು ಅನುಮತಿಯನ್ನು ಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಕರುಮಾರಿ ಸಹಕಾರ ಸಂಘದ ಮೂಲ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಬದಲಿಗೆ 2 ಮತ್ತು 3 ನೇ ಆರೋಪಿತರು ಬ್ಯಾಂಕಿಗೆ ನಕಲಿ ದಾಖಲೆಗಳನ್ನು ಸಲ್ಲಿಸಿ ಖಾತೆಯನ್ನು ತೆರೆದಿರುತ್ತಾರೆ ಹಾಗೂ ಸರ್ಕಾರಕ್ಕೆ ಸಂಬಂಧಿಸಿದ ರೂ.50,000/-ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಅದೇ ರೀತಿ 2 ಮತ್ತು 3 ನೇ ಆರೋಪಿತರು ಬಂಗಾರಪೇಟೆ ಶಾಖೆಯ ಡಿ.ಸಿ.ಸಿ. ಬ್ಯಾಂಕಿನಲ್ಲೂ ಕೂಡ ಖಾತೆಯನ್ನು ತೆರೆದು ಪರಿಶಿಷ್ಟ ಜಾತಿಯವರಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಮಂಜೂರಾದಂತಹ ರೂ.82,000/- ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ನನ್ನ ತನಿಖಾ ವರದಿಯಲ್ಲಿ ಕೆನರಾ ಬ್ಯಾಂಕಿನವರು ಮೋಸ ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ

ಎಂದರೆ ಸುಳ್ಳು. ಅದೇ ರೀತಿ ನನ್ನ ತನಿಖಾ ವರದಿಯಲ್ಲಿ 1 ರಿಂದ 3 ನೇ ಆರೋಪಿತರ ವಿರುದ್ಧ ಕಾನೂನು ಕ್ರಮಕೈಗೊಂಡು ಹಣವನ್ನು ವಸೂಲಾತಿ ಮಾಡಬೇಕಾಗುತ್ತದೆ ಎಂದು ತಿಳಿಸಿರುತ್ತೇನೆ. ಸಿ.ಸಿ.ನಂ.579/2014 ರಲ್ಲಿ 4 ನೇ ಆರೋಪಿಯ ವಿರುದ್ಧ ಕ್ರಮ ಜರುಗಿಸಬೇಕಾಗಿರುತ್ತದೆ ಎಂದು ಹೇಳಿ ಶಿಫಾರಸ್ಸು ಮಾಡಿರುವುದಿಲ್ಲ ಎಂದರೆ ಹೆಚ್ಚುವರಿ ತನಿಖೆಯ ಅವಶ್ಯಕತೆ ಇದೆ ಎಂದು ತಿಳಿಸಿರುತ್ತೇನೆ. 4 ನೇ ಆರೋಪಿಯ ವಿರುದ್ಧ ತನಿಖೆಯನ್ನು ನಡೆಸಲು ಶಿಫಾರಸ್ಸು ಮಾಡಲು ಅಧಿಕಾರ ಇರುವುದಿಲ್ಲ ಎಂದರೆ ಸುಳ್ಳು. ನಾನು ಕಲಂ 65 ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಪ್ರಕಾರ ತನಿಖೆಯನ್ನು ಮಾಡಿರುವುದಿಲ್ಲ ಹಾಗೂ ತನಿಖಾ ವರದಿಯನ್ನು ನೀಡಿರುವುದಿಲ್ಲ ಎಂದರೆ ಸುಳ್ಳು.

**<u>ಮರು ವಿಚಾರಣೆ:</u> ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಜಯಲಕ್ಷ್ಮೀ ಎನ್. ಬಿ)
ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್